ಆ) ಈ ಯೋಜನೆ ತಾತ್ಕಾಲಿಕವಾಗಿ ಗುರುತಿಸಿರುವ ಭೂಮಿಯಲ್ಲಿ ಸರ್ಕಾರಿ ಜಮೀನು 1931-38 ಎಕರೆಗಳು ಹಾಗೂ ಖಾಸಗಿ ಜಮೀನು 2295-082½ ಎಕರೆಗಳು ಆಗಿರುತ್ತದೆ.

ಇ) ಯೋಜನೆಗಾಗಿ ಭೂಮಿಯನ್ನು ವರ್ಗಾಯಿಸುವ ವಿಧಾನದ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಈ) ನಿರ್ಧಾರ ಇನ್ನು ತೆಗೆದುಕೊಳ್ಳಬೇಕಾಗಿದೆ.

ಉ) ಭೂ ವರ್ಗಾವಣೆಯ ವಿಧಾನವನ್ನು ಮತ್ತು ಬೆಲೆಯ ಬಗ್ಗೆ ನಿರ್ಧಾರ ತೆಗೆದುಕೊಂಡ ನಂತರ ಇದನ್ನು ನಿರ್ಧರಿಸಲಾಗುವುದು.

ಸರ್ಕಾರಿ ಸ್ವಾಮ್ಯದ ವಿಕ್ರಾಂತ್ ಟೈರ್ಸ್ ಕಾರ್ಖಾನೆಯ ನಷ್ಟಕ್ಕೆ ಕಾರಣಗಳು

516 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ವಿಕ್ರಾಂತ್ ಟೈರ್ಸ್ ಕಾರ್ಖಾನೆಯನ್ನು ಯಾವಾಗ ಸ್ಥಾಪಿಸಲಾಯಿತು?

ಆ) ಈ ಕಾರ್ಖಾನೆಯು ಎಲ್ಲಿಯವರೆಗೆ ಲಾಭ ಗಳಿಸಿತ್ತು?

ಇ) 1992ರ ನಂತರ ಇದು ನಷ್ಟವನ್ನು ಅನುಭವಿಸುತ್ತಿರುವುದ ನಿಜವಲ್ಲವೆ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಉ) ಈ ಕಾರ್ಖಾನೆಯ ವಶದಲ್ಲಿರುವ ಕಟ್ಟಡ, ಮೆಷಿನರಿ ಜಮೀನು ಮುಂತಾದ ಆಸ್ತಿಗಳ ಮೌಲ್ಯವೆಷ್ಟು?

ಊ) ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಸರ್ಕಾರ ನಿರ್ಧರಿಸಿದೆಯೆ?

ಋ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ವಿಕ್ರಾಂತ್ ಟೈರ್ಸ್ ಲಿಮಿಟೆಡ್‌ನ್ನು 1973ನೇ ಸಾಲಿನಲ್ಲಿ ಸ್ಥಾಪಿಸೆಲಾಯಿತು.

ಆ) ಈ ಕಂಪನಿಯು 1985-86 ರಿಂದ 1991-92 ರವರೆಗೆ ಸತತವಾಗಿ ಲಾಭ ಗಳಿಸಿದೆ.

ಇ) ಹೌದು.

ಈ) ನಷ್ಟ ಅನುಭವಿಸಲು ಮುಖ್ಯ ಕಾರಣಗಳು ಈ ಕೆಳನಂತಿವೆ :

1) ರೇಡಿಯಲ್ ಟೈರ್ ಪ್ಲಾಂಟಿನ ಕಡಿಮೆ ಸಾಮರ್ಥ್ಯದ ಉಪಯೋಗದಿಂದ ಆಗಸ್ಟ್ 1991ರಲ್ಲಿ ಹಾನಿಗೊಳಗಾದುದರ ತತ್ಪರಿಣಾಮವಾಗಿ ಅವಧಿ ಸಾಲದ ಮೇಲೆ ಬಡ್ಡಿ ಹೆಚ್ಚಾದುದರಿಂದ.

2) 1990-92 ರಲ್ಲಿ ದೇಶದಲ್ಲಿಯ ಹೆಚ್ಚುವರಿ ಸಾಮರ್ಥ್ಯ ಹೆಚ್ಚು ಟೈರು ಉತ್ಪಾದಕ ಹೆಚ್ಚು ಟೈರು ಉತ್ಪಾದಿಸುತ್ತಿರುವುದರಿಂದ ತೀವ್ರ ಸ್ಪರ್ಧೆಯಿಂದಾಗಿ

3) ಕಚ್ಚಾ ಸರಕುಗಳ ಬೆಲೆ ಅತಿಶಯವಾಗಿ ಹೆಚ್ಚಿದ್ದರಿಂದ ಮತ್ತು ಉತ್ಪಾದನಾ ಖರ್ಚು ಹೆಚ್ಚಿದ್ದರಿಂದ (ಕಂಪನಿಯ ಬೆಲೆಗಳನ್ನು ಕಾರಣ ಬದಲಾವಣೆ,ಮತ್ತು

5) ಆಧುನೀಕರಣದ ಸೌಲಭ್ಯ ಉತ್ಪಾದನೆಗಿಲ್ಲದ್ದರಿಂದ.

ಊ) ಜಮೀನು ರೂ. 42.89 ಲಕ್ಷಗಳು

ಪ್ಲಾಂಟ್ ಮತ್ತು ಮೆಷಿನರಿ ರೂ. 124.85 ಕೋಟಿಗಳು

ಋ) 1992ರ ನಂತರ ಸರ್ಕಾರದ ಸ್ವಾಮ್ಯದ ಕಂಪನಿ ಮತ್ತು ನಿಗಮಗಳ ಷೇರು ಬಂಡವಾಳ ವಿಕ್ರಾಂತ್ ಟೈರ್ಸ್ ನಿಯಮಿತದಲ್ಲಿ ಶೇ.51ಕ್ಕಿಂತ ಕಡಿಮೆಯಾಗಿದೆ. ತತ್ಪರಿಣಾಮವಾಗಿ ವಿಕ್ರಾಂತ ಟೈರ್ಸ್ ನಿಯಮಿತ ಸರ್ಕಾರದ ಕಂಪನಿಯಾಗಿರುವುದಿಲ್ಲ. ಈಗ ಕರ್ನಾಟಕ ಸರ್ಕಾರವು ತಾಂತ್ರಿಕ ಸಹಭಾಗಿತ್ವಕ್ಕೆ ಕೊಡದಾಗಿ ಬಂಡವಾಳ ಮಾಡುವ ಹಾಗೂ ಇತ್ತೀಚಿನ ತಾಂತ್ರಿಕತೆಯನ್ನು ಅಳವಡಿಸುವ ಪಾಲುದಾರರನ್ನು ತರಲು ಯೋಜಿಸಿದೆ. ಈ ಉದ್ದೇಶಕ್ಕಾಗಿ ಸರಕಾರದ ಕೆಎಸಎಐಡಿಸಿಯನ್ನು ನೋಡಲ್ ಎಜನ್ಸಿಯಾಗಿ ನೇಮಿಸಿದೆ. ಕೆಎಸಎಐಡಿಸಿ ಯು ಬಂಡವಾಳ ಹಿಂತೆಗೆದುಕೊಳ್ಳುವುದೆಂಬಂತೆ ಅರ್ಥೈಸುತ್ತದೆ.

ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸಾಲ ಸೌಲಭ್ಯದ ಯೋಜನೆಗಳ ವಿವರ

517 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮತ್ತು ಹಿಂದುಳಿದ ವರ್ಗದವರಿಗೆ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಸಾಲ ಯೋಜನೆಗಳಾವುವು, ವಿವರಗಳನ್ನು ಒದಗಿಸುವುದು?

ಆ) ಈ ಎಲ್ಲಾ ಯೋಜನೆಗಳನ್ನು ಕೆ.ಜಿ.ಎಫ್.ನ ನಿವಾಸಿಗಳಿಗೆ ಕಳೆದ ವರ್ಷಗಳಲ್ಲಿ ಒದಗಿಸಿರುವ ವಿವರಗಳನ್ನು ಒದಗಿಸುವುದು, ಮತ್ತು ಫಲಾನುಭವಿಗಳ ವಿವರವನ್ನು ಒದಗಿಸುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ಸ್ವಯಂ ಉದ್ಯೋಗ ಯೋಜನೆ.
2. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ.
3. ಬೀದಿ ಮಾರಾಟಗಾರರಿಗೆ ನೆರವು ಯೋಜನೆ.